## ನಿವೇದನೆ

# ಜನಸಂಖ್ಯೆ: ಅರಿವಿದೆ, ಆತಂಕ ಸೃಷ್ಟಿ ಬೇಡ

**ಜನಸಂಖ್ಯೆ ಏರಿಕೆಯು ತಂದೊಡ್ಡಬಹುದಾದ ಸವಾಲುಗಳ ಬಗೆಗೆ ಪ್ರಧಾನಿ ನರೇಂದ್ರ ಮೋದಿ ಪ್ರಸ್ತಾಪಿಸಿರುವುದು ಕುತೂಹಲಕ್ಕೆ ಕಾರಣವಾಗಿದೆ. ಸಣ್ಣ ಕುಟುಂಬದ ಜೊತೆ ದೇಶಭಕ್ತಿಯ ಆಯಾಮವೂ ಸೇರಿಕೊಂಡಿರುವುದು ಆ ಕುತೂಹಲವನ್ನು ಇಮ್ಮಡಿಗೊಳಿಸಿದೆ.**

ಜನಸಂಖ್ಯೆ ಏರಿಕೆಗೆ ಸಂಬಂಧಿಸಿದ ವಿಭಿನ್ನ ಪರಿಕಲ್ಪನೆಗಳು, ಚರ್ಚೆಗಳು ಐದಾರು ದಶಕಗಳ ಹಿನ್ನೆಲೆ ಹೊಂದಿವೆ. ನಿಯಂತ್ರಣ ಸಂದೇಶದ ಘೋಷವಾಕ್ಯಗಳನ್ನು ಕೇಳಿಸಿಕೊಂಡೇ ಒಂದು ಇಡೀ ಪೀಳಿಗೆ ಬೆಳೆದಿದೆ. 'ಸಣ್ಣ ಕುಟುಂಬ ಸುಖೀ ಕುಟುಂಬ', 'ನಾವಿಬ್ಬರು ನಮಗಿಬ್ಬರು' ಎಂಬಿತ್ಯಾದಿ ಘೋಷಣೆಗಳು ನಮ್ಮಲ್ಲಿ ಜನಜನಿತ.

ಜನಸಂಖ್ಯೆ ನಿಯಂತ್ರಣಕ್ಕೆ ಸಂಬಂಧಿಸಿದ ನೀತಿಗಳು 1950ರ ದಶಕದಲ್ಲೇ ನಮ್ಮಲ್ಲಿ ಒಡಮೂಡಿವೆ. ಕುಟುಂಬ ಯೋಜನೆಯ ಅಧಿಕೃತ ಕಾರ್ಯಕ್ರಮವು 1952ರಲ್ಲೇ ಆರಂಭವಾಗಿದೆ. ವಿಶ್ವದಲ್ಲೇ ಮೊದಲ ಬಾರಿಗೆ ಅಂತಹದೊಂದು ಕಾರ್ಯಕ್ರಮ ಶುರು ಮಾಡಿದ ಶ್ರೇಯ ಭಾರತಕ್ಕೆ ಇದೆ. ಶ್ರೇಯ ಅಷ್ಟೇ ಅಲ್ಲ, ಅದನ್ನು ವಿಪರೀತಕ್ಕೆ ಒಯ್ದ ಕಳಂಕವೂ ಅಂಟಿದೆ. ಈ ಸಮಸ್ಯೆಗೆ 'ಸ್ಫೋಟ' ಎಂಬಂತಹ ಆತಂಕದ ನುಡಿಗಟ್ಟುಗಳು ಸೇರಿಕೊಂಡವು. 1975ರಲ್ಲಿ ಜಾರಿಯಾದ ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ನಿಯಂತ್ರಣದ ಹೆಸರಿನಲ್ಲಿ ನಡೆದ ಅತಿರೇಕಗಳು ಜನರ ನೆನಪಿನ ಕೋಶದಿಂದ ಇನ್ನೂ ಮಾಸಿಲ್ಲ. ಬಡ ಕುಟುಂಬಗಳಿಗೆ ಸೇರಿದ ಪುರುಷರನ್ನು ಬಲವಂತದಿಂದ ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆಗೆ ಒಳಪಡಿಸಲಾಯಿತು. ಆ ವೇಳೆ, ಸಂಜಯ್ ಗಾಂಧಿಗೆ ಮೆತ್ತಿಕೊಂಡ ಮಸಿ ಅಳಿಸಿಹೋಗಲೇ ಇಲ್ಲ. ದೇಶದ ಕುಟುಂಬ ಯೋಜನೆ ಕಾರ್ಯಕ್ರಮದ ಇತಿಹಾಸದಲ್ಲಿ ಅದೊಂದು ಕಪ್ಪುಚುಕ್ಕೆಯಾಗಿ ಇಂದಿಗೂ ಉಳಿದಿದೆ.

ಇವೆಲ್ಲ ಇತಿಹಾಸದ ಪುಟ ಸೇರಿವೆ. ಅಂತೆಯೇ ಜನಸಂಖ್ಯೆ ಏರಿಕೆಗೆ ಸಂಬಂಧಿಸಿದ ಆತಂಕ ಕೂಡ ಬಹುಮಟ್ಟಿಗೆ ನೇಪಥ್ಯಕ್ಕೆ ಸರಿದಿತ್ತು. ಅಭಿವೃದ್ಧಿಗೆ ಸಂಬಂಧಿಸಿದ ಚರ್ಚೆಗಳಿಂದ ಹಿಂದೆ ಸರಿದಿದ್ದ ಈ ವಿಷಯ ಈಗ ಮತ್ತೆ ಮುನ್ನೆಲೆಗೆ ಬಂದಿದೆ. ಸ್ವಾತಂತ್ರ್ಯ ದಿನದ ಅಂಗವಾಗಿ ದೆಹಲಿಯ ಕೆಂಪುಕೋಟೆಯಿಂದ ರಾಷ್ಟ್ರವನ್ನು ಉದ್ದೇಶಿಸಿ ಭಾಷಣ ಮಾಡಿದ ಪ್ರಧಾನಿ ನರೇಂದ್ರ ಮೋದಿಯವರು ಜನಸಂಖ್ಯೆ ಏರಿಕೆಯು ತಂದೊಡ್ಡಬಹುದಾದ ಸವಾಲುಗಳ ಬಗೆಗೆ ಪ್ರಸ್ತಾಪಿಸಿರುವುದು ಕುತೂಹಲಕ್ಕೆ ಕಾರಣವಾಗಿದೆ. ಸಣ್ಣ ಕುಟುಂಬದ ಜೊತೆ ದೇಶಭಕ್ತಿಯ ಆಯಾಮ ಕೂಡ ಸೇರಿಕೊಂಡಿರುವುದು ಆ ಕುತೂಹಲವನ್ನು ಇಮ್ಮಡಿಗೊಳಿಸಿದೆ. ಇದರೊಂದಿಗೆ ಸಾಧಕ–ಬಾಧಕಗಳು ಸಹಜವಾಗಿಯೇ ಪುನಃ ಚರ್ಚೆಗೆ ಒಳಗಾಗಿವೆ.

ಸಣ್ಣ ಕುಟುಂಬ ಸುಖೀ ಕುಟುಂಬ ಮಾತಿನಲ್ಲಿ ಅತಿಶಯೋಕ್ತಿ ಏನೂ ಇಲ್ಲ. ಆದರೆ ಆ ಸಂದೇಶ ಈಗಾಗಲೇ ನಮ್ಮ ಜನರ ಮನಹೊಕ್ಕು ಬಹಳ ದಿನ ಆಗಿದೆ. ಅದರ ಫಲಶ್ರುತಿಯೂ ನಮ್ಮ ಮುಂದಿದೆ. ಒಟ್ಟು ಫಲವತ್ತತೆ ಪ್ರಮಾಣದಲ್ಲಿ ಅದು ಬಿಂಬಿತವೂ ಆಗಿದೆ. ಸಂತಾನೋತ್ಪತ್ತಿ ಸಾಮರ್ಥ್ಯವಿರುವ ವಯಸ್ಸಿನ (15ರಿಂದ 49 ವರ್ಷ) ಅವಧಿಯಲ್ಲಿ ಮಹಿಳೆಗೆ ಹುಟ್ಟಬಹುದಾದ ಮಕ್ಕಳ ಸರಾಸರಿ ಸಂಖ್ಯೆಯನ್ನು ಒಟ್ಟು ಫಲವತ್ತತೆ ಪ್ರಮಾಣ (ಟಿಎಫ್‌ಆರ್) ಎಂದು ಅಂದಾಜಿಸಲಾಗುತ್ತದೆ. ಟಿಎಫ್‌ಆರ್ ರಾಷ್ಟ್ರೀಯ ಸರಾಸರಿಯು 2.2ಕ್ಕೆ ಇಳಿದಿದೆ ಎಂಬುದೇ ಇದಕ್ಕೆ ಸಾಕ್ಷಿ. ಹಿಂದೂ, ಮುಸ್ಲಿಂ, ಕ್ರೈಸ್ತ, ಸಿಖ್ ಮತ್ತಿತರ ಎಲ್ಲ ಧರ್ಮಗಳ ಜನರಲ್ಲೂ ಈ ಪ್ರಮಾಣ ಇಳಿದಿದೆ. ಜೈನರಲ್ಲಿ ಇಳಿಕೆಯ ಪ್ರಮಾಣ ತುಸು ಹೆಚ್ಚೇ ಎನ್ನಬಹುದು. ಹಿಂದಿ ಹೃದಯಭಾಗದ ರಾಜ್ಯಗಳಾದ ಬಿಹಾರ ಮತ್ತು ಉತ್ತರಪ್ರದೇಶದಲ್ಲಿ ಮಾತ್ರ ಈ ಪ್ರಮಾಣ 3ರ ಆಸುಪಾಸಿನಲ್ಲಿ ಇದೆ. ಮುಸ್ಲಿಂ ಸಮುದಾಯ ಗಣನೀಯ ಪ್ರಮಾಣದಲ್ಲಿ ಇರುವ ಕೇರಳ, ಪಶ್ಚಿಮ ಬಂಗಾಳ ಒಳಗೊಂಡಂತೆ ಉಳಿದ ಕಡೆ ಈ ಸರಾಸರಿ ಪ್ರಮಾಣ ಕಡಿಮೆಯೇ ಇದೆ. ಮೋದಿ ಅವರು ಬಹುಶಃ ಬಿಹಾರ, ಉತ್ತರಪ್ರದೇಶವನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಈ ಮಾತು ಹೇಳಿರಬಹುದೇ!

ಅಧಿಕ ಜನಸಾಂದ್ರತೆಗೂ ಅಭಿವೃದ್ಧಿಗೂ ಸಂಬಂಧ ಇಲ್ಲ ಎಂಬುದನ್ನು ಜಪಾನ್‌ನಂತಹ ದೇಶಗಳು ನಿರೂಪಿಸಿವೆ. ಅಭಿವೃದ್ಧಿ ಸಾಧಿಸುವುದರಲ್ಲಿ ವಿಶ್ವಾಸ ಇದ್ದರೆ ಜನಸಂಖ್ಯೆ ವಿಚಾರದಲ್ಲಿ ಆತಂಕಪಡುವ ಅಗತ್ಯ ಇಲ್ಲ ಎಂಬ ಮಾದರಿಯನ್ನು ಆ ದೇಶ ನಮ್ಮ ಮುಂದೆ ಇಟ್ಟಿದೆ. ಕುಟುಂಬ ಯೋಜನೆಯ ಕಠಿಣ ನಿರ್ಬಂಧಗಳು ವಿವಿಧ ವಯೋಮಾನದ ಜನಸಂಖ್ಯೆಯಲ್ಲಿ ಇರಬೇಕಾದ ಸಮತೋಲನವನ್ನು ಏರುಪೇರಾಗಿಸುವ ಅಪಾಯವೂ ಇದೆ. ಅದಕ್ಕೆ ಚೀನಾ ದೇಶವೇ ನಿದರ್ಶನ. ಜನಸಂಖ್ಯಾ ಹೆಚ್ಚಳದಿಂದ ಸಂಪನ್ಮೂಲಗಳ ಮೇಲೆ ಬೀಳಬಹುದಾದ ಒತ್ತಡ ಹೆಚ್ಚುತ್ತದೆ ಎಂಬುದು ನಿಜವಾದರೂ ಅಭಿವೃದ್ಧಿ ಹೊಂದಿದ ದೇಶಗಳಿಗೆ ಹೋಲಿಸಿದರೆ ನಮ್ಮಲ್ಲಿ ತಲಾ ಬಳಕೆ ಪ್ರಮಾಣ ತೀರಾ ಕಡಿಮೆ ಎಂಬುದನ್ನು ಒಪ್ಪಲೇಬೇಕು. ಇವೆಲ್ಲಕ್ಕಿಂತ ಮಿಗಿಲಾಗಿ ಮಕ್ಕಳನ್ನು ಸಲಹುವ ಕಷ್ಟ ಪೋಷಕರಿಗೆ ಮನವರಿಕೆಯಾಗಿದ್ದು, ಸ್ವಯಂ ನಿಯಂತ್ರಣಕ್ಕೆ ಆ ಅರಿವೇ ಪ್ರೇರಣೆಯಾಗಿದೆ.

ಈ ವಿಚಾರದಲ್ಲಿ ಆತಂಕಪಡಬೇಕಾದ ಅಗತ್ಯ ಇಲ್ಲ ಎಂಬ ಭಾವನೆ ಬಲಗೊಂಡಿರುವಾಗ ಮತ್ತೆ ಆತಂಕದ ಅಲೆ ಎಬ್ಬಿಸುವ ಅಗತ್ಯ ಇದೆಯೇ ಎಂಬುದು ಚಿಂತನೆಗೆ ಯೋಗ್ಯ. ಸಮಾಜ ಬೇರೆ ಬೇರೆ ನೆಲೆಗಳಲ್ಲಿ ಧ್ರುವೀಕರಣಗೊಂಡಿದೆ. ಇಂತಹ ಸಂದರ್ಭದಲ್ಲಿ ಈ ಬಗೆಯ ವಿಚಾರಗಳು ಇನ್ನಾವುದೋ ಅಪನಂಬಿಕೆಗೆ ಆಸ್ಪದ ಕೊಡದಿದ್ದರೆ ಅದೇ 'ಭಾಗ್ಯ'.



ಈಶ್ವರ

■ ಎನ್. ಉದಯಕುಮಾರ್